# "ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ" ಯೋಜನೆಯ ಬಗ್ಗೆ ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆಗಳು

| ಕ್ರ.ಸಂ. | ಪದೇ ಪದೇ ಕೇಳಲಾಗುವ ಪ್ರಶ್ನೆಗಳು | ಉತ್ತರ |
|---|---|---|
| 1 | "ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ" ಯೋಜನೆ ಎಂದರೇನು? | "ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ" ಯೋಜನೆಯು ಸಾರ್ವತ್ರಿಕ ಆರೋಗ್ಯ ರಕ್ಷಣೆಯಾಗಿದ್ದು, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ಸಂಯೋಜಿತ ಯೋಜನೆಯಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಪ್ರಾಥಮಿಕ, ಸಾಮಾನ್ಯ ದ್ವಿತೀಯ, ಕ್ಲಿಷ್ಟಕರ ದ್ವಿತೀಯ, ತೃತೀಯ ಹಾಗೂ ತುರ್ತು ಹಂತದ ಚಿಕಿತ್ಸೆಗಳನ್ನು ನೀಡಲಾಗುತ್ತದೆ. ಈ ಯೋಜನೆಯು ಭರವಸೆ ಮಾದರಿಯಲ್ಲಿ (Assurance mode) ಆರೋಗ್ಯ ಸೇವೆ ಒದಗಿಸುವ ಯೋಜನೆಯಾಗಿರುತ್ತದೆ. |
| 2 | ಯೋಜನೆಯಡಿ ಸೌಲಭ್ಯ ಎಲ್ಲರಿಗೂ ಸಿಗುತ್ತದೆಯೇ? | ಹೌದು, ಕರ್ನಾಟಕ ರಾಜ್ಯದ ಎಲ್ಲಾ ನಿವಾಸಿಗಳಿಗೆ "ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ" ಯೋಜನೆಯಡಿ ಆರೋಗ್ಯ ರಕ್ಷಣೆ ಒಸಗಿಸಲಾಗುತ್ತಿದೆ. |
| 3 | ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ ಎಷ್ಟು ಬಗೆಯ ಚಿಕಿತ್ಸೆಗಳು ಲಭ್ಯವಿದೆ? | ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಪ್ರಾಥಮಿಕ ಹಂತದ ಕಾಯಿಲೆಗಳು, ದ್ವಿತೀಯ ಹಂತದ ಕಾಯಿಲೆಗಳು, ತೃತೀಯ ಹಂತದ ಕಾಯಿಲೆಗಳು ಹಾಗೂ ತುರ್ತು ಚಿಕಿತ್ಸೆಗಳೂ ಸೇರಿದಂತೆ ಒಟ್ಟು 1650 ಚಿಕಿತ್ಸಾ ವಿಧಾನಗಳಿಗೆ ಚಿಕಿತ್ಸೆ ಒದಗಿಸಲಾಗುತ್ತದೆ. |
| 4 | ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಸೌಲಭ್ಯ ಪಡೆಯಲು ಇರುವ ಮಾನದಂಡಗಳೇನು..? ಯಾವ ದಾಖಲೆಗಳನ್ನು ಒದಗಿಸಬೇಕು..? | ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಮಾನದಂಡಗಳು ಅತ್ಯಂತ ಸರಳವಾಗಿವೆ. ಸಾರ್ವಜನಿಕರು ತಮ್ಮ ಪಡಿತರ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳನ್ನು ಹಾಜರು ಪಡಿಸಿ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಸೌಲಭ್ಯ ಪಡೆಯಬಹುದಾಗಿದೆ. |
| 5 | ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಸೌಲಭ್ಯ ಪಡೆಯುವುದು ಹೇಗೆ? | ಜನರಿಗೆ ಯಾವುದೇ ರೀತಿಯ ಅನಾರೋಗ್ಯದ ತೊಂದರೆ ಆದಾಗ ಮೊದಲು ಸರ್ಕಾರಿ ಆಸ್ಪತ್ರೆ ಹೋಗಬೇಕು. ಅಲ್ಲಿ ವೈದ್ಯರು ರೋಗಿಯ ತಪಾಸಣೆ ನಡೆಸುತ್ತಾರೆ. ಆ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭ್ಯವಿದ್ದರೆ ಅಲ್ಲಿಯೇ ರೋಗಿಗೆ ಚಿಕಿತ್ಸೆ ನೀಡುತ್ತಾರೆ. ಒಂದೊಮ್ಮೆ ಆ ಕಾಯಿಲೆಗೆ ಚಿಕಿತ್ಸೆ ಲಭ್ಯವಿಲ್ಲದಿದ್ದರೆ ರೋಗಿಗೆ ರೆಫರಲ್ ಪತ್ರ ನೀಡುತ್ತಾರೆ. ಆಗ |

| ಕ್ರ.ಸಂ. | ಪದೇ ಪದೇ ಕೇಳಲಾಗುವ ಪ್ರಶ್ನೆಗಳು | ಉತ್ತರ |
|---|---|---|
| | | ರೋಗಿಯು ಆ ರೆಫರಲ್ ಪತ್ರ ಪಡೆದುಕೊಂಡು ಅವರ ಇಷ್ಟಾನುಸಾರ ನೋಂದಾಯಿತ ಖಾಸಗಿ ಆಸ್ಪತ್ರೆ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದು.<br>ತುರ್ತು ಕಾಯಿಲೆಗಳಿಗೆ ಯಾವುದೆ ರೆಫರಲ್ ಪಡೆಯುವ ಅಗತ್ಯವಿಲ್ಲ. ನೀವು ನೇರವಾಗಿ ಹತ್ತಿರದ ನೋಂದಾಯಿತ ಖಾಸಗಿ ಆಸ್ಪತ್ರೆ ಆಥವಾ ಸಾರ್ವಜನಿಕ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಬಹುದು. |
| 6 | ತುರ್ತು ಸಂದರ್ಭದಲ್ಲಿ ನಾನು ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ಹೋಗಿ ರೆಫರಲ್ ಪಡೆದ ನಂತರ ಚಿಕಿತ್ಸೆ ಪಡೆಯಬೇಕೇ? | ಸರ್ಕಾರಿ ಆದೇಶದ ಅನುಬಂಧ-4ರಲ್ಲಿ ತಿಳಿರುವ ತುರ್ತು ಚಿಕಿತ್ಸಾ ವಿಧಾನಗಳಿಗೆ ಯಾವುದೇ ರೆಫರಲ್ ಇಲ್ಲದೆ, ಹತ್ತಿರದ ನೊಂದಾಯಿತ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಬಹುದು. |
| 7 | ಸಾಮಾನ್ಯ ಸಂದರ್ಭಗಳಲ್ಲಿ ರೆಫರಲ್ ಇಲ್ಲದೆ ನೇರವಾಗಿ ಖಾಸಗಿ ಆಸ್ಪತ್ರೆಗೆ ಹೋದರೆ ಏನಾದರೂ ತೊಂದರೆ ಇದೆಯಾ: | ರೆಫರಲ್ ತೆಗೆದುಕೊಳ್ಳದೆ ನೇರವಾಗಿ ಖಾಸಗಿ ಆಸ್ಪತ್ರೆಗೆ ಹೋದ್ರೆ, ಅಲ್ಲಿ ಕಾಯಿಲೆ ಪರೀಕ್ಷೆಗೆ ದುಭಾರಿ ಶುಲ್ಕ ವೆಚ್ಚವಾಗುತ್ತದೆ. ಅದು ಹತ್ತರಿಂದ ಇಪ್ಪತ್ತು ಸಾವಿರದವರೆಗೂ ಅಗಬಹುದು. ಅದನ್ನು ರೋಗಿ ತಮ್ಮ ಕೈಯಿಂದ ಕೊಡಬೇಕಾಗುತ್ತೆ. ಆಗ ಮತ್ತೆ ಹಣಕಾಸಿನ ತೊಂದರೆಗೆ ಒಳಗಾಗುತ್ತಾರೆ. ಇದನ್ನು ತಪ್ಪಿಸಲು ಸಾರ್ವಜನಿಕರು ಮೊದಲು ಸರ್ಕಾರಿ ಆಸ್ಪತ್ರೆ ಹೋಗಬೇಕು. ಅಲ್ಲಿ ರೋಗಪತ್ತೆ ಪರೀಕ್ಷೆಗಳನ್ನು ಉಚಿತವಾಗಿ ಮಾಡ್ತಾರೆ. ಅನವಶ್ಯಕವಾಗಿ ಹಣದ ಹೊರೆ ಜನರ ಮೇಲೆ ಬೀಳುವುದಿಲ್ಲ. ಹಣಕಾಸಿನ ತೊಂದರೆನೂ ತಪ್ಪುತ್ತೆ. ಜನರಿಗೆ ಉಚಿತವಾಗಿ ಚಿಕಿತ್ಸೇನೂ ಸಿಗುತ್ತೆ. |
| 8 | ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಆರೋಗ್ಯ ಕಾರ್ಡ್ ನೀಡಲಾಗುತ್ತದೆಯೇ? ಅದನ್ನು ಎಲ್ಲಿ ನೀಡುತ್ತಾರೆ. | ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ ರಾಜ್ಯದ ಎಲ್ಲ ನಾಗರೀಕರಿಗೂ ಹೆಲ್ತ್ ಕಾರ್ಡ್ ನೀಡುವ ವ್ಯವಸ್ಥೆ ಮಾಡಿದ್ದೇವೆ.<br>ಸಾರ್ವಜನಿಕರು ಆಧಾರ್ ಕಾರ್ಡ್ ಮತ್ತು ಪಡಿತರ ಕಾರ್ಡ್‌ಗಳನ್ನು ಹಾಜರು ಪಡಿಸಿ ಆರೋಗ್ಯ ಕಾರ್ಡ್ ಪಡೆಯಬಹುದು.<br>ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೂ.10/- ನೀಡಿ ಆರೋಗ್ಯ ಕಾರ್ಡ್‌ನ್ನು ಪಡೆದುಕೊಳ್ಳಬಹುದು.<br>ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್ ಕೇಂದ್ರಗಳಲ್ಲಿ ಎ4 ಅಳತೆಯ ಕಾಗದದ ಕಾರ್ಡಿಗೆ ರೂ.10/- ಮತ್ತು ಪ್ಲಾಸ್ಟಿಕ್ ಕಾರ್ಡಿಗೆ |

| ಕ್ರ.ಸಂ. | ಪದೇ ಪದೇ ಕೇಳಲಾಗುವ ಪ್ರಶ್ನೆಗಳು | ಉತ್ತರ |
|---|---|---|
| | | ರೂ. 35/- ಶುಲ್ಕದೊಂದಿಗೆ ಆರೋಗ್ಯ ಕಾರ್ಡ್ ಪಡೆದುಕೊಳ್ಳಬಹುದು. |
| 9 | ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಆರೋಗ್ಯ ಕಾರ್ಡ್ ಪಡೆಯಲು ಬೇಕಿರುವ ದಾಖಲಾತಿಗಳು ಯಾವುವು? | ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯಡಿ ಆರೋಗ್ಯ ಕಾರ್ಡ್ ಪಡೆಯಲು ಫಲಾನುಭವಿಗಳು ಮೊದಲನೇ ಬಾರಿಗೆ ಆಧಾರ್ ಮತ್ತು ಪಡಿತರ ಚೀಟಿಗಳನ್ನು ತರಬೇಕು. |
| 10 | ನನ್ನಲ್ಲಿ ಆಧಾರ್ ಕಾರ್ಡು ಇದ್ದು ಪಡಿತರ ಚೀಟಿ ಇಲ್ಲದಿದ್ದರೆ ? | ಅಂತಹ ಫಲಾನುಭವಿಗಳು ಖಂಡಿತವಾಗಿಯೂ ಈ ಯೋಜನೆಯಲ್ಲಿ ನೊಂದಾಯಿಸಿಕೊಳ್ಳಲು ಅವಕಾಶವಿರುತ್ತದೆ. ಅವರನ್ನು 'ಸಾಮಾನ್ಯ ರೋಗಿ' ಎಂದು ಪರಿಗಣಿಸಲಾಗುವುದು ಹಾಗೂ ಯೋಜನೆಯ ಸೌಲಭ್ಯಗಳನ್ನು ಸಾಮಾನ್ಯ ರೋಗಿಯ ಅರ್ಹತೆಯಂತೆ ಪಡೆಯುತ್ತಾರೆ, |
| 11 | ನನ್ನಲ್ಲಿ ಆಧಾರ್ ಕಾರ್ಡು ಅಥವಾ ಪಿಡಿಎಸ್ ಕಾರ್ಡು ಇಲ್ಲದಿದ್ದಲ್ಲಿ, ನಾನು ಯೋಜನೆಯಡಿ ನೊಂದಾಯಿಸಬಹುದೇ? | ಇಲ್ಲ, ನೀವು ಎರಡೂ ಕಾರ್ಡುಗಳನ್ನು ಹೊಂದಿಲ್ಲದಿದ್ದಲ್ಲಿ ಯೋಜನೆಯಡಿ ನೊಂದಾಯಿಸಲು ಸಾಧ್ಯವಿಲ್ಲ. ಆದರೆ ಸಾರ್ವಜನಿಕ ಆರೋಗ್ಯ ಕೇಂದ್ರಗಳ ನಿಯಮ ಹಾಗೂ ಸಾಮಾನ್ಯ ಚಿಕಿತ್ಸೆಗಳ ಪ್ರಕಾರ ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಚಿಕಿತ್ಸೆ ಪಡೆಯಬಹುದು. |
| 12 | ಯೋಜನೆಯಲ್ಲಿ ಆರೋಗ್ಯ ಕಾರ್ಡ್ ನೊಂದಾಯಿಸಿಕೊಳ್ಳಲು ವಯಸ್ಸಿನ ಮಿತಿ ಇದೆಯೇ? | ಯೋಜನೆಯಲ್ಲಿ ಆರೋಗ್ಯ ಕಾರ್ಡ್ ನೊಂದಾವಣೆಗೆ ವಯಸ್ಸಿನ ಮಿತಿ ಇರುವುದಿಲ್ಲ |
| 13 | ಆಧಾರ್ ಹೊಂದಿರದ ಚಿಕ್ಕ ಮಕ್ಕಳನ್ನು ನೊಂದಾಯಿಸಬಹುದೇ? | 3 ವರ್ಷದೊಳಗಿನ ಮಕ್ಕಳನ್ನು ಅವರ ತಂದೆ-ತಾಯಿ / ಪೋಷಕರ ಆಧಾರ್‌ನೊಂದಿಗೆ ಯೋಜನೆಯಡಿ ನೊಂದಾವಣೆ ಮಾಡಬಹುದು |
| 14 | ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆಯಬೇಕು ಅಂದರೆ ಈ ಆರೋಗ್ಯ ಕಾರ್ಡ್ ಕಡ್ಡಾಯವೆ? | ಕಡ್ಡಾಯವಿಲ್ಲ. ಫಲಾನುಭವಿಗಳು ತಮ್ಮ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್ ಹಾಜರು ಪಡಿಸಿ ಚಿಕಿತ್ಸೆ ಪಡೆದುಕೊಳ್ಳಬಹುದು. |
| 15 | ಯೋಜನೆಯಡಿಯಲ್ಲಿ ಅರ್ಹತಾ/ಬಿಪಿಎಲ್ ಕುಟುಂಬಗಳಿಗೆ ವಿಶೇಷ ಸೌಲಭ್ಯಗಳಿವೆಯೇ? | ಹೌದು, ಅರ್ಹತಾ/ಬಿಪಿಎಲ್ ಕುಟುಂಬಗಳಿಗೆ ವಾರ್ಷಿಕ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಲಭ್ಯವಿದೆ. |
| 16 | ಆಹಾರ ಭದ್ರತಾ ಕಾಯಿದೆಯಡಿಯಲ್ಲಿ ಅರ್ಹವಲ್ಲದ/ಎಪಿಎಲ್ ಕುಟುಂಬಗಳಿಗೆ ಪ್ರಯೋಜನವೇನು? | ಆಹಾರ ಭದ್ರತಾ ಕಾಯಿದೆಯಡಿಯಲ್ಲಿ ಅರ್ಹತೆ ಪಡೆಯದ/ಎಪಿಎಲ್ ಫಲಾನುಭವಿಗಳನ್ನು ಈ ಯೋಜನೆಯಡಿ ಸಾಮಾನ್ಯ ರೋಗಿ ಎಂದು ಕರೆಯಲಾಗಿದೆ.<br>ಸಾಮಾನ್ಯ ರೋಗಿಗೆ ಚಿಕಿತ್ಸೆಯು ಸಹಪಾವತಿ ಆಧಾರದ ಮೇಲೆ ಚಿಕಿತ್ಸೆಗೆ ಆಸ್ಪತ್ರೆಗಳಿಗೆ ಮರುಪಾವತಿ ಮಾಡಲಾಗುವುದು. ಸಾಮಾನ್ಯ ವರ್ಗಗಳ ರೋಗಿಗಳಿಗೆ ಚಿಕಿತ್ಸಾ ವೆಚ್ಚದ ಮರುಪಾವತಿಯನ್ನು ಪ್ಯಾಕೇಜ್ ದರಗಳ |

| ಕ್ರ.ಸಂ. | ಪದೇ ಪದೇ ಕೇಳಲಾಗುವ ಪ್ರಶ್ನೆಗಳು | ಉತ್ತರ |
|---|---|---|
| | | ವೆಚ್ಚದ ಶೇ.30% ಕ್ಕೆ ಮಿತಿಗೊಳಿಸಲಾಗಿದ್ದು ವಾರ್ಷಿಕ ರೂ.1.50 ಲಕ್ಷಗಳವರೆಗೆ ಚಿಕಿತ್ಸೆ ಒದಗಿಸಲಾಗುತ್ತದೆ. |
| 17 | ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಯಾವ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ? | ಯೋಜನೆಯ ಮಾರ್ಗಸೂಚಿಗಳನ್ವಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗು ನೊಂದಾವಣೆಗೊಂಡ ಖಾಸಗಿ ಆಸ್ಪತ್ರೆಗಳಲ್ಲಿ ರೆಫರಲ್ ಮೂಲಕ ಫಲಾನುಭವಿಗಳು ಚಿಕಿತ್ಸೆ ಪಡೆಯಬಹುದು. |
| 18 | ಸಾಮಾನ್ಯ (ಎಪಿಎಲ್) ಕುಟುಂಬಗಳಿಗೆ ಯೋಜನೆಯಲ್ಲಿ ಉಚಿತ ಚಿಕಿತ್ಸೆ ಸಿಗುವುದೇ? | ಉಚಿತ ಚಿಕಿತ್ಸೆ ಇಲ್ಲ, ಯೋಜನೆಯಡಿಯಲ್ಲಿ ಸಾಮಾನ್ಯ (ಎಪಿಎಲ್) ಫಲಾನುಭವಿಗಳು ಸಹ–ಪಾವತಿಯ ಆಧಾರದ ಮೇಲೆ ಚಿಕಿತ್ಸೆ ದೊರೆಯಲಿದೆ. ಸರ್ಕಾರದಪ್ಯಾಕೇಜ್ ದರದ ಶೇಕಡ 30% ರಷ್ಟು ರೂ.1.50 ಲಕ್ಷಗಳವರೆಗೆ ಚಿಕಿತ್ಸಾ ವೆಚ್ಚ ಭರಿಸಲಾಗುತ್ತದೆ. |
| 19 | ಯೋಜನೆಯಡಿಯಲ್ಲಿ ವಾರ್ಡ್ ಅರ್ಹತೆ ಏನು? | ಫಲಾನುಭವಿಗಳು ಯೋಜನೆಯಡಿಯಲ್ಲಿ ಸಾಮಾನ್ಯ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯಬೇಕು. |
| 20 | ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ಶುಲ್ಕವನ್ನು ಪಾವತಿಸಬೇಕೇ? | ಸಾರ್ವಜನಿಕ ಆರೋಗ್ಯ ಕೇಂದ್ರಗಳಲ್ಲಿ ನಿಗದಿಪಡಿಸಿದ ಬಳಕೆದಾರರ ವೆಚ್ಚವನ್ನು ಪಾವತಿಸಿ ಪ್ರಾಥಮಿಕ ಮತ್ತು ಸಾಮಾನ್ಯ ದ್ವಿತೀಯ ಹಂತದ ಚಿಕಿತ್ಸೆಗಳನ್ನು ಪಡೆಯುವುದು. |
| 21 | ನಾನು ಖಾಸಗಿ ಆಸ್ಪತ್ರೆಗಳಿಗೆ ನೇರವಾಗಿ ಹೋಗಿ ಯೋಜನೆಯ ಸೌಲಭ್ಯವನ್ನು ಪಡೆಯಬಹುದೆ? | ಇಲ್ಲ. ಮೊದಲು ಸರ್ಕಾರಿ ಆಸ್ಪತ್ರೆಗಳಿಗೆ ಹೋಗಬೇಕು. ಅಲ್ಲಿ ಚಿಕಿತ್ಸೆ ಲಭ್ಯವಿಲ್ಲದಿದ್ದಲ್ಲಿ ಮಾತ್ರ ರೆಫರ್ ಮಾಡಲಾಗುತ್ತದೆ. ಒಂದು ವೇಳೆ ರೆಫರಲ್ ಪಡೆಯದೇ ಚಿಕಿತ್ಸೆ ಪಡೆದುಕೊಂಡರೆ ಅಂತಹ ಫಲಾನುಭವಿಗಳು ಯೋಜನೆಯ ಪ್ರಯೋಜನವನ್ನು ಪಡೆಯಲು ಅರ್ಹರಿರುವುದಿಲ್ಲ ಹಾಗೂ ಚಿಕಿತ್ಸೆಯ ವೆಚ್ಚವನ್ನು ಅವರೇ ಪಾವತಿಸಬೇಕಾಗುವುದು. |
| 21 | ನಾನು ಸರ್ಕಾರಿ ಆಸ್ಪತ್ರೆಯಿಂದ ರೆಫೆರಲ್ ಪಡೆದುಕೊಂಡ ನಂತರ ಎಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು. | ನಿಮ್ಮ ಇಚ್ಛಾನುಸಾರ ಯಾವುದೇ ನೊಂದಾಯಿತ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಬಹುದು. |
| 22 | ಯೋಜನೆಯ ಅಡಿಯಲ್ಲಿ ಚಿಕಿತ್ಸೆ ಪಡೆಯಲು ಸಾರ್ವಜನಿಕರು ಅಥವಾ ರೋಗಿಗಳು ಸಹಾಯಕ್ಕಾಗಿ ಯಾರನ್ನು ಸಂಪರ್ಕಿಸಬೇಕು. ಅದಕ್ಕೆ ಏನಾದರೂ ವ್ಯವಸ್ಥೆ ಮಾಡಲಾಗಿದೆಯೇ? | ಹೌದು, ಸಾರ್ವಜನಿಕರು ಮತ್ತು ರೋಗಿಗಳ ಸಹಾಯಕ್ಕಾಗಿ ಕಾಲ್‌ಸೆಂಟರ್ ವ್ಯವಸ್ಥೆ ಕಲ್ಪಿಸಲಾಗಿದೆ. ಯೋಜನೆಯ ಸೌಲಭ್ಯದ ಬಗ್ಗೆ, ಚಿಕಿತ್ಸಾ ಸೌಲಭ್ಯಗಳ ಬಗ್ಗೆ, ಆಸ್ಪತ್ರೆಗಳ ಮಾಹಿತಿಯ ಬಗ್ಗೆ, ಆಸ್ಪತ್ರೆಗಳ ಆರೋಗ್ಯ ಮಿತ್ರರ ಫೋನ್ ನಂಬರ್ ಪಡೆದುಕೊಳ್ಳುವ ಬಗ್ಗೆ, ಏನಾದರೂ ಕುಂದು ಕೊರತೆಗಳಿದ್ದರೆ ಅವುಗಳ ಬಗ್ಗೆ ಈ ಕಾಲ್ ಸೆಂಟರ್ ಸಂಖ್ಯೆಗಳಿಗೆ 1800 425 8330 ಮತ್ತು 1800 425 2646 ಕರೆ ಮಾಡಿದರೆ ಇಲ್ಲಿ ನಿಮಗೆ ಮಾಹಿತಿ ನೀಡುತ್ತಾರೆ. |

| ಕ್ರ.ಸಂ. | ಪದೇ ಪದೇ ಕೇಳಲಾಗುವ ಪ್ರಶ್ನೆಗಳು | ಉತ್ತರ |
|---|---|---|
| | | ಫೋನ್ ಕರೆ ಮಾಡಲು ಯಾವುದೇ ಶುಲ್ಕ ಇರೋದಿಲ್ಲ. ಇದೂ ಕೂಡ ಸಂಪೂರ್ಣ ಉಚಿತವಾಗಿರುತ್ತದೆ.<br>ರೆಫರಲ್ ಪಡೆದುಕೊಂಡು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಹೋಗುವ ಫಲಾನುಭವಿಗಳು, ಕಾಲ್ ಸೆಂಟರ್‌ಗೆ ಕರೆ ಮಾಡಿದಲ್ಲಿ ಆಸ್ಪತ್ರೆಯ ವಿವರ, ಆಸ್ಪತ್ರೆಯ ಟೆಲಿಫೋನ್ ಸಂಖ್ಯೆ, ಆರೋಗ್ಯ ಮಿತ್ರರ ಟೆಲಿಫೋನ್ ಸಂಖ್ಯೆ ನೀಡುತ್ತಾರೆ. ಸಾರ್ವಜನಿಕರಿಗೆ ಚಿಕಿತ್ಸಾ ಸೌಲಭ್ಯ ಒದಗಿಸುವ ಬಗ್ಗೆ ಆರೋಗ್ಯ ಮಿತ್ರರು ಸಂಪೂರ್ಣ ಸಹಕಾರ ನೀಡುತ್ತಾರೆ. |